ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ೧೨ನೇ ಜೂನ್ ೧೯೯೦ ಜ್ಯೇಷ್ಠ ೨೨, ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಚಿಂಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಶ್ರೀ ಶಂಕರ ಹನುಮಂತ ಕರನಿಂಗಾರವರ ಜನ್ಮದಿನ. ಅವರಿಗೆ ನಾನು ಈ ಸದನದ ಪರವಾಗಿ ನಮ್ಮ ಹಾರ್ದಿಕ ಶುಭಾಶಯಗಳನ್ನು ಕೋರಿ ಅವರಿಗೆ ಹೆಚ್ಚು ಆಯುರಾರೋಗ್ಯ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಪ್ರಶ್ನೋತ್ತರ

ಪ್ರಶ್ನೆ ಸಂಖ್ಯೆ :೧೧೭ (ತಿರಿಪ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಬರುವ ತನಕ ಮುಂದಕ್ಕೆ ಹಾಕಿ.

ಶ್ರೀ ಜಿ. ಎಂ. ಕಾನಡೆ.—ಮತ್ತೆ ಯಾವಾಗ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದು ?

ಅಧ್ಯಕ್ಷರು.—ಮಾನ್ಯ ಕಾನಡೆಯವರೇ ಮಾನ್ಯ ಮಂತ್ರಿಗಳೇ ಈ ಪ್ರಶ್ನೆಗೆ ಉತ್ತರ ಒದಗಿಸಿ ಕೊಡಲು ಸ್ವಲ್ಪ ಕಾಲಾವಕಾಶವನ್ನು ಮೊನ್ನೆ ಕೇಳಿದ್ದಾರೆ. ಆದ್ದರಿಂದ ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶ್ರೀ ಜಿ.ಎಂ. ಕಾನಡೆ.—ಯಾವಾಗ ?

ಅಧ್ಯಕ್ಷರು.—ಮುಂದಿನ ಮಂಗಳವಾರ. ನಾವು ಸಭೆ ಸೇರುತ್ತೇವೆ ಅಲ್ಲವೇ ?

ಶ್ರೀ ಜಿ.ಎಂ. ಕಾನಡೆ.—ಆಗಬಹುದು.

ಮಂಗಳೂರಿನಲ್ಲಿ ಆರಕ್ಷಕ ದಳ

೪೨೬. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರಿನಲ್ಲಿ ಟ್ರಾಫಿಕ್ ಪೋಲೀಸರ ಶೀಘ್ರ ಕೊರತೆಯಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಸಾಧಾರಣ ಎಷ್ಟು ಪೋಲೀಸ್ ಸಿಬ್ಬಂದಿಯ ಅಗತ್ಯವಿದೆ ಮತ್ತು ಈಗಿರುವ ಸಿಬ್ಬಂದಿ ಬಲ ಎಷ್ಟು,

ಇ) ಅಗತ್ಯ ಸಿಬ್ಬಂದಿಯನ್ನು ತುಂಬಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮವೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು,

ಆ) ಪುಸಕ್ತ ಮಂಗಳೂರಿನಲ್ಲಿ ಎರಡು ಸಂಚಾರಿ ಪೋಲೀಸ್ ಠಾಣೆಗಳಿವೆ. ಪ್ರತಿ ಠಾಣೆಯ ಸಿಬ್ಬಂದಿ ಬಲ ಹೀಗಿದೆ.—

ಪಿಎಸ್ಐ	– ೦
ಎಎಸ್ಐ	– ೨
ಹೆಚ್ಸಿ	– ೩
ಪಿಸಿ	– ೩೮
ಒಟ್ಟು	೪೪

ಇ) ಲಭ್ಯವಿರುವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಸಿಬ್ಬಂದಿಯ ಕೊರತೆಯನ್ನು ನೀಗಿಸಲು ಪರಿಶೀಲಿಸಲಾಗುವುದು.

SRI BLASIUS M. D' SOUZA.—Mr. Speaker, Sir, I have got the answer. To my first question whether the Government is aware of the acute shortage of traffic police personnel in Mangalore. The answer given is 'yes' To my second question regarding the normal police force required and the present strength, it is stated that there are two traffic police stations and the total strength is 88. To my third question regarding the steps that the Government is going to take in filing up the required police staff, the answer given was that the proposals for augmentation will be considered keeping inview the availability of resources.

Sir, this police force was sanctioned about 15 years back, and the vehicular traffic as well as pedestrians are increasing day by day in Mangalore City. As you know, there is no scope for broadening the roads. All the roads are being broadened everywhere but not in Mangalore city and lot of acidents are happening on the roads in Mangalore city and I would like to remind the Government that its first obligatory duty is law and order and it is a question of law and order. To say that the proposals for augmentation will be considered keeping inview the availability of resouarces. I am readly sorry for this answer. I request the Hon'ble Minister through you to tell me whether law and order is given first preference or any other thing.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ವ್ಯಾಕುಲವನ್ನು ವ್ಯಕ್ತಪಡಿಸಿದ್ದಾರೆ ಅದೇ ವ್ಯಾಕುಲ ಸರ್ಕಾರದ ವ್ಯಾಕುಲ ಸಹ ಆಗಿದೆ. ಮಂಗಳೂರು ನಗರದಲ್ಲಿ ಸಂಚಾರ ವ್ಯವಸ್ಥೆ ಸುಗಮವಾಗಿ ನಿರ್ವಹಣೆ ಮಾಡಲು ೪ ಪಿ.ಎಸ್.ಐ ೬ ಎಎಸ್.ಐ ಗಳು ಮತ್ತು ೧೭ ಹೆಚ್.ಸಿ. ಗಳನ್ನು ಮತ್ತು ೬೧ ಜನ ಪಿ.ಸಿ. ಗಳು ಬೇಕೆಂದು ಒಂದು ಪ್ರೊಪೋಜಲ್‌ನ್ನು ಮಂಜೂರಾತಿಗಾಗಿ ದಿನಾಂಕ ೨೮-೧೧-೮೭ ರಲ್ಲಿ ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಕಳುಹಿಸಿದ್ದರು. ಆದರೆ ದಿನಾಂಕ ೨೭-೪-೮೮ ರಲ್ಲಿ ಸರ್ಕಾರ ಅದನ್ನು ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಮತ್ತು ಆಗ ಆರ್ಥಿಕ ಮಿತವ್ಯಯ ಕಡ್ಡಾಯವಾಗಿ ಪಾಲಿಸುತ್ತಿದ್ದರಿಂದ ಆ ಪ್ರೊಪೋಜಲ್‌ನ್ನು ಒಪ್ಪಲಿಕ್ಕೆ ಆಗಲಿಲ್ಲ. ಆದ್ದರಿಂದ ಅದನ್ನು ಈಗ ಸರ್ಕಾರ ಗಮನದಲ್ಲಿಟ್ಟು ಕೊಂಡು ಮಂಗಳೂರು ಮಹಾ ನಗರಕ್ಕೆ ಸಂಚಾರಿ ವ್ಯವಸ್ಥೆ ನಿರ್ವಹಣೆ ಸುಲಭವಾಗಿ ಮಾಡಲು ೮೮ ಜನ ಸಿಬ್ಬಂದಿ ಅಗತ್ಯ ಇದೆ ಎಂಬುದು ಮನವರಿಕೆ ಆಗಿದೆ. ಮತ್ತು ಮಂಗಳೂರು ನಗರದಲ್ಲಿ ೩೦ ಪಾಸಗಿ

ವಾಹನಗಳ ಮತ್ತು ಸರ್ಕಾರದ ವಾಹನಗಳಂ ಸರಾಸರಿ ನೋಂದಾವಣೆಯಾಗುತ್ತಿವೆ. ಆದ್ದರಿಂದ ವಾಹನಗಳ ನೋಂದಾವಣೆ ಹೆಚ್ಚಾದಂತೆ ಸಿಬ್ಬಂದಿಯನ್ನು ಸಹ ಹೆಚ್ಚು ಮಾಡತಕ್ಕಂಥ ಒಂದು ಅಳತೆ ಗೋಲನ್ನು ಅಥವಾ ಸಾಮರಸ್ಯವನ್ನು ಸಾಧನೆ ಮಾಡುವುದಕ್ಕೆ ಆಗದಿದ್ದರೂ ಸಹ ಈ ಬೇಡಿಕೆಯನ್ನು ಈಡೇರಿಸತಕ್ಕ ಸಾಮರ್ಥ್ಯ ಸರ್ಕಾರಕ್ಕೆ ಇದೆ. ಆದರೆ ಈ ಹಿಂದೆ ೧೯೮೮ರಲ್ಲಿ ಈ ಒಂದು ಪ್ರೊಪೋಜಲನ್ನು ಸರ್ಕಾರ ಒಪ್ಪಿಲ್ಲ. ಈಗ ಸನ್ಮಾನ್ಯ ಸದಸ್ಯರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ, ಅದನ್ನು ಪುರುಚಿಂತನೆ ಮಾಡತಕ್ಕಂಥ ಆಲೋಚನೆ ಸರ್ಕಾರಕ್ಕೆ ಇದೆ.

SRI BLASIUS M D' SOUZA.—Under the obligatory functions of the Government, the first function I should say, is maintaining law and order. There should not be any financial constraints. Financial constraints can be for any other duty of the Government. Our Hon'ble Minister has agreed that in 1978 there is a proposal and this 88 police force is not sufficient. I request the hon·ble minister once again to tell me whether there is any other priority over and above the law and order priority.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಒಂದೊಂದು ಇಲಾಖೆಯಲ್ಲಿ ಒಂದೊಂದು ಪ್ರಯಾರಿಟಿ ಇರುತ್ತದೆ. ಕೆಲವಕ್ಕೆ ಆದ್ಯತೆ ಹೆಚ್ಚಿರುತ್ತದೆ ಕೆಲವಕ್ಕೆ ಆದ್ಯತೆ ಕಡಿಮೆ ಇರುತ್ತದೆ. ಕಾನೂನು ವ್ಯವಸ್ಥೆಯೂ ಒಂದು ಆದ್ಯತೆ ಕೊಡತಕ್ಕ ವಿಚಾರ ಹೌದು ಆದರೆ ಈ ರಾಜ್ಯದ ಒಟ್ಟು ಆದ್ಯತೆಗಳ ಒಂದು ತಳಹದಿಯ ಮೇಲೆ ಬಂತ್ತು, ಈ ಆದ್ಯತೆಯನ್ನು ಪೂರೈಸುವುದರಲ್ಲಿ, ಹಣಕಾಸಿನ ಸಂಪನ್ಮೂಲದ ವ್ಯವಸ್ಥೆಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ತಮಗೆ ಗೊತ್ತಿದೆ. ಇದು ಮಂಗಳೂರು ನಗರಕ್ಕೆ ಸೀಮಿತವಾದಂಥ ಪ್ರಶ್ನೆಯಲ್ಲ. ಇಡೀ ಕರ್ನಾಟಕ ರಾಜ್ಯದ ಪೋಲೀಸ್ ವ್ಯವಸ್ಥೆಯಲ್ಲಿಯೇ ಸಾಕಷ್ಟು ಅನುಕೂಲಗಳನ್ನು ಒದಗಿಸಬೇಕಾದುದಿದೆ. ಅದನ್ನು ಕ್ರಮೇಣ ಹೇಗೆ ನಿರ್ವಹಿಸುವುದಕ್ಕೆ ಸಾಧ್ಯವಿದೆಯೇ ಅದನ್ನು ಹಂತ ಹಂತವಾಗಿ ಸರ್ಕಾರ ಖಂಡಿತವಾಗಿಯೂ ಮಾಡುತ್ತದೆ.

ಶ್ರೀಮತಿ ಸರೋಜಿನಿ ಮಹಿಷಿ ಸಮಿತಿಯ ವರದಿ

೪೫೬. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಸಲುವಾಗಿ ನೇಮಿಸಿದ ಶ್ರೀಮತಿ ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರಕ್ಕೆ ಯಾವಾಗ ಒಪ್ಪಿಸಲಾಯಿತು ಹಾಗೂ ಒಪ್ಪಿಕೊಳ್ಳಲಾಗಿದೆಯೇ.

ಆ) ಹಾಗಿದ್ದಲ್ಲಿ ಆ ವರದಿಯನ್ನು ಅನುಷ್ಠಾನಕ್ಕೆ ತರಲು ಕೈಗೊಂಡ ಕ್ರಮಗಳೇನು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಡಾ. ಸರೋಜಿನಿ ಮಹಿಷಿ ಸಮಿತಿಯು ಅಂತಿಮ ವರದಿಯನ್ನು ಸರ್ಕಾರಕ್ಕೆ ದಿನಾಂಕ ೩೦-೧೨-೮೬ರಂದು ಸಲ್ಲಿಸಿತು. ಈ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸುವುದಕ್ಕೋಸ್ಕರ ಡಾ. ವಿ. ವೆಂಕಟೇಶ್ (ಮಾಜಿ ಸಂಸತ್ ಸದಸ್ಯರು) ಇವರ ಅಧ್ಯಕ್ಷತೆಯಲ್ಲಿ ಕನ್ನಡಿಗರ ಉದ್ಯೋಗ ಸಮಿತಿಯನ್ನು ದಿನಾಂಕ ೧೮-೫-೮೮ರಂದು ಸರ್ಕಾರವು ರಚಿಸಿತು. ಈ ಸಮಿತಿಯು ಮಧ್ಯಂತರ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿತು. ಡಾ. ವಿ. ವೆಂಕಟೇಶ್‌ರವರು ಕನ್ನಡಿಗರ ಉದ್ಯೋಗ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ದಿನಾಂಕ ೩೦-೬-೮೯ರಂದು ರಾಜೀನಾಮೆಯನ್ನು ನೀಡಿದರು. ಆದರೆ ಸಮಿತಿಯು ಅಂತಿಮ ವರದಿಯನ್ನು ಸಲ್ಲಿಸುವವರೆಗೆ ಅಥವಾ ದಿನಾಂಕ ೧೫-೧೧-೮೯ರವರೆವಿಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆವಿಗೆ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವಂತೆ ಡಾ. ವಿ.ವೆಂಕಟೇಶ್‌ರವರನ್ನು ಸರ್ಕಾರವು ಕೋರಿತು. ಆದರೆ ಈ ಸಮಿತಿಯು ದಿನಾಂಕ ೧೫-೧೧-೮೯ರೊಳಗೆ ಅಂತಿಮ ವರದಿಯನ್ನು ಸಲ್ಲಿಸದಿದ್ದ ಕಾರಣ ಸಮಿತಿಯನ್ನು ಅಂತ್ಯಗೊಳಿಸಿ, ಈ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಲು ಕಾನೂನು, ಸಂಸದೀಯ, ಯೋಜನೆಮತ್ತು ಪ್ರವಾಸೋದ್ಯಮ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ದಿನಾಂಕ ೧೬-೩-೯೦ರಂದು ರಚಿಸಿದೆ.